**ನೆರೆಮನೆಯಾಕೆ:** ಏನಮ್ಮಾ, ಅಡುಗೆ ಮಾಡಲು ಬರುತ್ತಾ?
**ಹುಡುಗಿ:** ಆರ್ಡರ್ ಮಾಡಿದ್ರೆ ಬರುತ್ತೆ ಆಂಟಿ!

***

**ಹೆಂಡತಿ:** ರೀ... ಯಾಕ್ರೀ ದಿನಾ ಸಕ್ಕರೆ ಡಬ್ಬ ತೆಗೆದು ನೋಡ್ತಾ ಇರ್ತೀರಾ?
**ಗಂಡ:** ಡಾಕ್ಟ್ರು ಡೈಲಿ ಶುಗರ್ ಚೆಕ್ ಮಾಡಿ ಅಂತ ಹೇಳಿದ್ದಾರೆ!

***

ಬ್ಯಾಂಕ್‌ಗೆ ಹೋಗಿದ್ದ ರಂಗಮ್ಮ ಕನ್ನಡ ಗೊತ್ತಿಲ್ಲದ ಕ್ಯಾಷಿಯರ್‌ನ ಮುಖ ಮೂತಿ ನೋಡದಂತೆ ಹೊಡೀತಿದ್ಲು.
**ಮ್ಯಾನೇಜರ್:** ಯಾಕಮ್ಮಾ, ಹೀಗೆ ಹೊಡೀತಿದ್ದೀರಾ?
**ರಂಗಮ್ಮ:** ಅವ ನನ್ನನ್ನೇ ಮುಂಡೆ ಬಾ ಅಂತಿದ್ದಾನೆ.

ಗಂಡ ಹೆಂಡತಿ ಇಬ್ಬರೂ ಬಹಳ ಹೊತ್ತಿನಿಂದ ಬೈಯುತ್ತಾ ಜಗಳವಾಡುತ್ತಿದ್ದರು. ಆಗ ನೆರೆಮನೆಯವರು ಹೋಗಿ, 'ಜಗಳದಿಂದ ದೇಹಕ್ಕೆ ಆದ ಗಾಯ ಗುಣಪಡಿಸಬಹುದು. ಆದರೆ ಮಾತಿನಿಂದ ಮನಸ್ಸಿಗೆ ಅದ ಗಾಯ ಬೇಗ ಮಾಸುವುದಿಲ್ಲ' ಎಂದರು. ನಂತರ ಇಬ್ಬರೂ ಬಾಯಿಮಾತಿನ ಜಗಳ ನಿಲ್ಲಿಸಿ, ಕೈ ಕೈ ಮಿಲಾಯಿಸಿ, ಹೊಡೆದಾಡತೊಡಗಿದರು!

ಒಂದು ಸಂಜೆ ಗಂಡ ಹೆಂಡತಿ ಮಾತಾಡ್ತಾ ಇದ್ರು. ಹೆಂಡತಿಗೆ ಒಂದು ಸಂದೇಹ ಬಂತು. ಗಂಡನನ್ನು ಕೇಳಿದಳು 'ರೀ, ಋಣಾನುಬಂಧ ರೂಪೇಣ ಪಶು, ಪತ್ನಿ ಸುತಾಲಯ ಅಂತ ಹೇಳ್ತಾರಲ್ಲ ಪತೀನೇ ಇಲ್ಲವಲ್ಲ ಇದರಲ್ಲಿ' ಅಂದಳು. ಅದಕ್ಕೆ ಗಂಡ ಹೇಳಿದ 'ಪಶು ಅಂದರೆ ಇನ್ಯಾರು'?

ಅತ್ತೆ ಮನೆಗೆ ಅಳಿಯ ಬಂದ. ಅತ್ತೆ ಹೇಳಿದರು. 'ನಿಮ್ದೇ ಮನೆ ಅಂತ ಅಂದುಕೊಳ್ಳಿ ಅಳಿಯಂದಿರೆ', ಅಷ್ಟು ಹೇಳಿದ್ದೇ ತಡ, ಅಳಿಯ ಕಸಗುಡಿಸಿ, ಮನೆಯೊರಸಿ, ಪಾತ್ರೆ ತೊಳೆದೇ ಬಿಟ್ಟ!

ಗುಂಡನ ಹೆಂಡತಿ ಸತ್ತೋಗಿದ್ದಳು. ಸ್ನೇಹಿತನ ಹೆಂಡತಿ ಸತ್ತಿದ್ದಕ್ಕೆ ಸಾಂತ್ವನ ಹೇಳಲು ಹೋಗಿದ್ದ ರಂಗ 'ಹೇಗೆ ಸತ್ತಳು'? ಎಂದು ಕೇಳಿದ. ಅದಕ್ಕೆ ಉತ್ತರಿಸಿದ ಗುಂಡ, 'ಅಂಗಡಿಯಿಂದ ಟೀ ಪುಡಿ ತಂದು ಟೀ ಮಾಡಿಕೊಂಡು ಕುಡಿಯುತ್ತಿದ್ದಳು. ಸಡನ್ನಾಗಿ ಡೆತ್ ಆಯ್ತು' ಎಂದ. ತಕ್ಷಣ ಎಚ್ಚರಗೊಂಡ ರಂಗ, 'ಆ ಟೀ ಪುಡಿ ಇನ್ನೂ ಉಳಿದಿದ್ರೆ ನಂಗೂ ಸ್ವಲ್ಪ ಕೊಡ್ತಿಯಾ? ಅಂದ.




**ಕ್ಯಾಷಿಯರ್:** ಸರ್, ನಾನು ಮಂಡೇ ಬಾ ಅಂದಿದ್ದು!

***

**ಹೆಂಡ್ತಿ:** ರೀ, ನಾನು ಸಾಯ್ತೀನಿ.
**ಗಂಡ:** ತೋಗೋ ಡೈರಿ ಮಿಲ್ಕ್.
**ಹೆಂಡ್ತಿ:** ಅದು ಯಾಕ್ರೀ?
**ಗಂಡ:** ಒಳ್ಳೆಯ ಕೆಲಸ ಮಾಡೋಕೆ ಮುನ್ನ ಬಾಯಿ ಸಿಹಿ ಮಾಡ್ಬೇಕಂತೆ ಅದಕ್ಕೆ.

***

**ಮೇಷ್ಟ್ರು:** ಮಕ್ಕಳೇ, ದಿನಾ ಒಂದು ಲೋಟ ಹಸುವಿನ ಹಾಲು ಕುಡೀರಿ. ನಿಮ್ಮ ಬುದ್ಧಿಶಕ್ತಿ ಬೆಳೆಯುತ್ತೆ.
**ಗುಂಡ:** ಸುಮ್ನಿರಿ ಸರ್, ನೀವು ಹೇಳೋ ಮಾತು ನಿಜವೇ ಆಗಿದ್ರೆ ನಮ್ಮನೆ ಕರು ಇಷ್ಟೊತ್ತಿಗೆ ದೊಡ್ಡ ಡಾಕ್ಟ್ರೊ ಇಲ್ಲ ವಿಜ್ಞಾನಿಯೋ ಆಗಬೇಕಿತ್ತು.

***

**ಡಾಕ್ಟರ್:** ಉಸಿರಾಟದ ತೊಂದರೆ ಇದೆಯೇ?
**ತಿಮ್ಮ:** ಹೌದು. ಮದುವೆಯಾದಾಗಿನಿಂದ ಒಂದು ದಿನವೂ ಸರಿಯಾಗಿ ಉಸಿರಾಡಿದ್ದೇ ಇಲ್ಲ.

***

**ದಿನಸಿ ಅಂಗಡಿಯವ:** ಹಲೋ, ಇದು ದಿನಸಿ ಅಂಗಡಿ.
**ಗಿರಾಕಿ:** ಸರ್, ನಿಮ್ಮ ಅಂಗಡಿಯ ಲೊಕೇಷನ್ ಕಳಿಸಿ.
**ಅಂಗಡಿಯವ:** ಲೋಕೇಶ ಇವತ್ತು ರಜೆ ಇದಾನೆ. ರಾಜೇಶನನ್ನ ಕಳಿಸ್ತೀನಿ.

***

**ಮ್ಯಾನೇಜರ್:** ಇದೇನು ಈ ಥರದ ಸಿಗ್ನೇಚರ್?
**ಗುಂಡ:** ಇದು ನಮ್ಮ ಅಜ್ಜಿಯ ಸಿಗ್ನೇಚರ್ ಸರ್.
**ಮ್ಯಾನೇಜರ್:** ಇದೊಂದು ವಿಚಿತ್ರ ಸಿಗ್ನೇಚರ್ ಆಗಿದೆ. ಅವರ ಹೆಸರೇನು?
**ಗುಂಡ:** ಜಿಲೇಬಿ ಬಾಯಿ ಸಾರ್!

ಸಂಗ್ರಹ: ಪುಷ್ಪ ಎನ್.ಕೆ. ರಾವ್, ಉಡುಪಿ

